**1 ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು  ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಅಸಲು ದಾವಾ ಸಂ.46/2023   P.W.-1**

ದಿನಾಂಕಃ 22-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಹೆಚ್.ಎಸ್.ಎನ್., ವಾದಿ ಪರ ವಕೀಲರಿಂದ

ಸಾಕ್ಷಿಯು  ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕಾಲಂ 1 ರಲ್ಲಿ ತೋರಿಸಿದಂತೆ ನಿಶಾನೆಗೊಳಿಸಲಾಗಿದೆ.

| 1 | 2 |
|---|---|
| ನಿಪಿ-7 | ಒರಿಜಿನಲ್ ರೇಷನ್ ಕಾರ್ಡ್ |
| ನಿಪಿ-8 | ಒರಿಜಿನಲ್ ಗುರುತಿನ ಚೀಟಿ |
| ನಿಪಿ-9 | ಒರಿಜಿನಲ್  ಆಧಾರ್ ಕಾರ್ಡ್ |

ಪಾಟೀ ಸವಾಲುಃ ಪ್ರತಿವಾದಿ ಪರ **APP** ವಕೀಲರಿಂದ ಃ-

ಈ ಹಿಂದೇ ನನ್ನ ಹೆಸರು ನನ್ನ ಶಾಲಾ ದಾಖಲಾತಿಗಳಲ್ಲಿ ಈ ಜಿ ರಾಜನಾಯ್ಕ ಎಂದು ತಪ್ಪಾಗಿ ನಮೂದು ಆಗಿರುವುದು ತೆಗೆದು ಹಾಕಿ ತೊಳಚ ನಾಯ್ಕ ನಮೂದಿಸುವಂತೆ ಅಸಲು ದಾವ ಸಂಖೆಃ 87/2016 ದಾವೆ ಸಲ್ಲಿಸಿದ್ದೆ ಎಂದರೆ ಸರಿ.  ಆ ದಾವೆಯಲ್ಲಿ ನಿಮ್ಮ ಇನಿಶಿಯಲ್ ಕೂಡ ಈ ಟಿ  ಎಂದು ತಿದ್ದುಪಡಿ ಮಾಡಲು ಕೋರಿರುವುದಿಲ್ಲ ಎಂದರೆ ಸರಿ. ಸದರಿ ತಪ್ಪು ನಿಮ್ಮಿಂದ ಆಗಿದ್ದು, ಪ್ರತಿವಾದಿಗಳಿಂದು ಯಾವುದೇ ತಪ್ಪು ಆಗಿರುವುದಿಲ್ಲ ನೀವು ಸರಿಯಾಗಿ ಪರಿಹಾರವನ್ನು ಕೋರಿರುವುದಿಲ್ಲ ಎಂದರೆ ಸರಿಯಲ್ಲ.   ಅಸಲು ದಾವ ಸಂಖೆಃ 354/2016 ರಲ್ಲಿ ನಿಮ್ಮ ತಂದೆ ಹೆಸರು ಈ ಆರ್ ರಾಜನಾಯ್ಕ ಎಂದು ತಪ್ಪಾಗಿ ನಮೂದು ಆಗಿರುವುದು ತೆಗೆದು ಹಾಕಿ ತೊಳಚ ನಾಯ್ಕ ನಮೂದಿಸುವಂತೆ ಕೋರಿ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೀರಾ ಎಂದರೆ ಸರಿ.  ಪ್ರತಿವಾದಿಗಳಿಂದ ಯಾವುದೇ ತಪ್ಪು ಆಗಿರುವುದಿಲ್ಲ ನಿಮ್ಮ ತಂದೆ ತಾಯಿ ನೀಡಿರುವ ಮಾಹಿತಿಯಂತೆ ಪ್ರತಿವಾದಿಗಳು ನಮೂದು ಮಾಡಿರುತ್ತಾರೆ ಎಂದರೆ ಸರಿ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು,   ತರೀಕೆರೆ.